ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳು

2592(3197); ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ)

ಅ) ಹುನಗುಂದ ಮತಕ್ಷೇತ್ರದಲ್ಲಿ ಅನುಷ್ಠಾನಗೊಂಡಿರುವ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳು ಎಷ್ಟು;

ಆ) ಇಸ್ಲಾಂಪುರ ಸೇರಿದಂತೆ ಅರವತ್ತು ಹಳ್ಳಿಗಳ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಕಳಪೆಯಾಗಿ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಇ) ಹುನಗುಂದ ಮತಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು (ವಿವರ ಒದಗಿಸುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಹುನಗುಂದ ತಾಲ್ಲೂಕಿನಲ್ಲಿ ಕೆಳಕಂಡ 5 ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಅನುಷ್ಠಾನವನ್ನು ಕೈಗೊಳ್ಳಲಾಗಿದೆ.

ಕ್ರ.ಸಂ.	ಯೋಜನೆಯ ಹೆಸರು
1	ಮೂಗನೂರು ಮತ್ತು ಇತರೆ 8 ಗ್ರಾಮಗಳು
2	ಇದ್ದಲಗಿ ಮತ್ತು ಇತರೆ 10 ಗ್ರಾಮಗಳು
3	ಇಸ್ಲಾಂಪುರ ಮತ್ತು ಇತರೆ 60 ಗ್ರಾಮಗಳು
4	ಐಹೊಳೆ ಮತ್ತು ಇತರೆ 14 ಗ್ರಾಮಗಳು
5	ಇಲ್ಲಾಳ ಮತ್ತು ಇತರೆ 17 ಗ್ರಾಮಗಳು

ಆ) ಬಂದಿದೆ.

ಇಸ್ಲಾಂಪುರ ಮತ್ತು ಇತರೆ 60 ಗ್ರಾಮಗಳಿಗೆ ಯೋಜನೆಯನ್ನು ವಿನ್ಯಾಸ ಮಾಡಲಾಗಿದ್ದು, ಇದರಲ್ಲಿ 4 ಗ್ರಾಮಗಳು ಮುಳುಗಡೆ ಗ್ರಾಮಗಳಾಗಿದ್ದರಿಂದ ಇವುಗಳನ್ನು ಹೊರತು ಪಡಿಸಿ 53 ಗ್ರಾಮಗಳಿಗೆ ಪ್ರಾಯೋಗಿಕವಾಗಿ ದಿನಾಂಕ 31/03/2010 ರಿಂದ ಕುಡಿಯುವ ನೀರಿನ ಪೂರೈಸಲಾಗುತ್ತಿದೆ. ಇನ್ನುಳಿದ 3 ಗ್ರಾಮಗಳಿಗೆ ತಾಂತ್ರಿಕ ತೊಂದರೆಗಳಿಂದಾಗಿ ಕುಡಿಯುವ ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ. ಈ ಗ್ರಾಮಗಳಿಗೆ ಹಾಲಿ ಕುಡಿಯುವ ನೀರಿನ ವ್ಯವಸ್ಥೆಯಿಂದಲೇ ನೀರನ್ನು ಪೂರೈಸಲಾಗುತ್ತಿದೆ. ಯೋಜನೆಯು ಪೂರ್ಣಗೊಳ್ಳದೆ ಇರುವ ಬಗ್ಗೆ ಈ ಕಛೇರಿ ಪತ್ರ ದಿನಾಂಕ 22/06/2013ರಲ್ಲಿ ಟೆಂಡರನ್ನು ಗುತ್ತಿಗೆದಾರರ ಆರ್ಥಿಕ ಹೊಣೆ ಮತ್ತು ಜವಬ್ದಾರಿ ಮೇಲೆ ರದ್ದುಗೊಳಿಸಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದೇಶ ನೀಡಲಾಗಿತ್ತು. ಸದರಿ ಟೆಂಡರ್‌ನ ರದ್ಧತಿ ಬಗ್ಗೆ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ ದಾವೆ ಹೂಡಿದ್ದು, ಇದರ ಬಗ್ಗೆ ಇಲಾಖಾ ವತಿಯಿಂದ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

ಬಾಕಿ ಇರುವ ಮತ್ತು ದೋಷಪೂರಿತ ಕಾಮಗಾರಿಗಳ ಮೊತ್ತ ₹ 68.00 ಲಕ್ಷಗಳಂತೆ ಲೆಕ್ಕ ಹಾಕಿ ₹ 44.33 ಲಕ್ಷಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಶ್ರೀ ವೀರಭದ್ರಪ್ಪ ಅಂಗಡಿ, ಇವರಿಗೆ ದಿನಾಂಕ 16.05.2014ರಂದು ಕಾರ್ಯಾದೇಶವನ್ನು ನೀಡಲಾಗಿದೆ.

ಇ) ಸದ್ಯಕ್ಕೆ ಮೇಲೆ (ಅ) ರಲ್ಲಿ ತಿಳಿಸಿರುವ 5 ಯೋಜನೆಗಳನ್ನು ಹೊರತು ಪಡಿಸಿ ಇತರೆ ಯಾವುದೇ ಬಹುಗ್ರಾಮ ಯೋಜನೆಗಳ ಪ್ರಸ್ತಾವನೆಯಿಲ್ಲ.